06/1

## 2010

# COMMERCE AND ACCOUNTANCY

## Paper 1

*Time : 3 Hours ]* *[ Maximum Marks : 300*

---

### INSTRUCTIONS

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* ***compulsory****.*
*Answer any* ***three*** *questions in Part D.*

SEAL

---

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ಭಾಷಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

06/1

# 2010

## COMMERCE AND ACCOUNTANCY

### Paper 1

*Time : 3 Hours ]* *[ Maximum Marks : 300*

SEAL

**INSTRUCTIONS**

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* **compulsory**.
*Answer any* **three** *questions in Part D.*

**ವಿಶೇಷ ಸೂಚನೆ :** ಈ ಮೇಲ್ಕಂಡ ಸೂಚನೆಗಳ ಕನ್ನಡ ಭಾಷಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

## PART A

4×5=20

*Answer each question in about 50 words. Each question carries 5 marks.*

1. (a) What is backlog depreciation ? Explain with a numerical example.

 (b) Distinguish between the value of an unlevered firm and a levered firm.

 (c) Define income under the provisions of the Indian Income Tax Act, 1961.

 (d) What are contingent assets ? Give three examples of such assets.

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

1. (ಎ) ಹಿಂಬೀಳಿಕೆ ಸವಕಳಿ (backlog depreciation) ಎಂದರೇನು ? ಒಂದು ಸಂಖ್ಯಾತ್ಮಕ ಉದಾಹರಣೆಯೊಂದಿಗೆ ವಿವರಿಸಿ.

   (ಬಿ) ಸನ್ನೆ ರಹಿತ ಉದ್ಯಮ ಮತ್ತು ಸನ್ನೆ ಸಹಿತ ಉದ್ಯಮದ ಮೌಲ್ಯಗಳ ವ್ಯತ್ಯಾಸವನ್ನು ತಿಳಿಸಿ.

   (ಸಿ) ಭಾರತೀಯ ಆದಾಯ ತೆರಿಗೆ ಅಧಿನಿಯಮ, 1961 ರ ಉಪಬಂಧಗಳ ಪ್ರಕಾರ ಆದಾಯ ಎಂದರೇನು ವಿವರಿಸಿ.

   (ಡಿ) ಅನುಷಂಗಿಕ ಸ್ವತ್ತುಗಳು ಎಂದರೇನು ? ಇಂತಹ ಸ್ವತ್ತುಗಳ ಮೂರು ಉದಾಹರಣೆಗಳನ್ನು ಕೊಡಿ.

[Turn over

## PART B

*10×10=100*

*Answer each theory question in about 100 words. Each question carries 10 marks.*

**2.** Explain the relevance of principal budget in the context of managerial planning and decision-making by citing a suitable example.

**3.** Enumerate the provisions of the Indian Companies Act, 1956, relating to appointment of an auditor of a company.

**4.** Compare and contrast Net-Income Approach and Net-Operating Income Approach to capital structure decision.

**5.** Explain the constituents of Indian Capital Market.

**6.** Discuss the practical difficulties that you come across while adopting the philosophy, in financial reporting, of accounting for price level changes.

**7.** The Balance Sheet of Progressive Ltd. as on 31st March, 2010 is given below :

| Liabilities | ₹ in lakhs | Assets | ₹ in lakhs |
|---|---|---|---|
| Share Capital | 160 | Fixed assets | 360 |
| P & L A/c | 40 | Stock | 80 |
| 13% Debentures | 240 | Debtors | 40 |
| Sundry Creditors | 80 | Cash at Bank | 40 |
| | 520 | | 520 |

Normal return on shareholders' fund is 20% and normal return on long-term fund is 18%. Future maintainable profit (before interest) is ₹ 76·8 lakhs.

You are required to compute the value of goodwill as per the capitalisation method if the capital employed is based on

(a) "Shareholders' Fund" Approach, and

(b) "Long-term Fund" Approach.

## ಭಾಗ B

*10×10=100*

*ಪ್ರತಿಯೊಂದು ಸಿದ್ಧಾಂತರೂಪದ (theory) ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

**2.** ವ್ಯವಸ್ಥಾಪನ ಯೋಜನೆ ಮತ್ತು ನಿರ್ಣಯ ಕೈಗೊಳ್ಳುವಿಕೆಯ ಸಂದರ್ಭದಲ್ಲಿ ಅಸಲು ಬಜೆಟ್ಟಿನ (Principal Budget) ಪ್ರಸ್ತುತತೆಯನ್ನು ಸೂಕ್ತ ಉದಾಹರಣೆಯೊಂದಿಗೆ ವಿವರಿಸಿ.

**3.** ಒಂದು ಕಂಪನಿಯ ಲೆಕ್ಕಪರಿಶೋಧಕರ ನೇಮಕಾತಿಗೆ ಸಂಬಂಧಿಸಿದಂತೆ ಭಾರತೀಯ ಕಂಪನಿಗಳ ಅಧಿನಿಯಮ, 1956 ರಲ್ಲಿರುವ ಉಪಬಂಧಗಳನ್ನು ನಿರೂಪಿಸಿ.

**4.** ಬಂಡವಾಳ ರಚನೆ ನಿರ್ಣಯದಲ್ಲಿ ನಿವ್ವಳ ಆದಾಯ ದೃಷ್ಟಿ ಮತ್ತು ನಿವ್ವಳ ಕಾರ್ಯಾಚರಣಾ ಆದಾಯ ದೃಷ್ಟಿಗಳನ್ನು ಹೋಲಿಸಿ ಮತ್ತು ವೈದೃಶ್ಯ ತಿಳಿಸಿ.

**5.** ಭಾರತೀಯ ಬಂಡವಾಳ ಮಾರುಕಟ್ಟೆಯ ಘಟಕಾಂಶಗಳನ್ನು ವಿವರಿಸಿ.

**6.** ಬೆಲೆ ಮಟ್ಟದ ಬದಲಾವಣೆಗಳಿಗಾಗಿ, ಲೆಕ್ಕಪತ್ರಗಳ ಹಣಕಾಸಿನ ವರದಿ ಮಾಡಲು ತತ್ವವೊಂದನ್ನು ಅಳವಡಿಸಿಕೊಳ್ಳುವಾಗ ನಿಮಗೆ ವಾಸ್ತವವಾಗಿ ಎದುರಾಗುವಂತಹ ತೊಂದರೆಗಳನ್ನು ಕುರಿತು ಚರ್ಚಿಸಿ.

**7.** 2010 ರ ಮಾರ್ಚ್ 31 ರಂದು ಇರುವಂತೆ, ಪ್ರೋಗ್ರೆಸಿವ್ ಲಿಮಿಟೆಡ್‌ನ ಸಂತುಲನ ಪಟ್ಟಿಯನ್ನು ಈ ಕೆಳಗೆ ಕೊಡಲಾಗಿದೆ :

| ಹೊಣೆಗಾರಿಕೆಗಳು | ₹ ಲಕ್ಷಗಳಲ್ಲಿ | ಸ್ವತ್ತುಗಳು | ₹ ಲಕ್ಷಗಳಲ್ಲಿ |
|---|---|---|---|
| ಶೇರು ಬಂಡವಾಳ | 160 | ಸ್ಥಿರ ಸ್ವತ್ತುಗಳು | 360 |
| ಲಾಭ ಮತ್ತು ನಷ್ಟದ ಲೆಕ್ಕ | 40 | ದಾಸ್ತಾನು | 80 |
| 13% ಸಾಲ ಪತ್ರಗಳು | 240 | ಋಣದಾತರು | 40 |
| ಸಣ್ಣಪುಟ್ಟ ಸಾಲಿಗರು | 80 | ಬ್ಯಾಂಕಿನಲ್ಲಿ ನಗದು | 40 |
| | 520 | | 520 |

ಶೇರುದಾರರ ನಿಧಿಯ ಮೇಲಿನ ಸಾಮಾನ್ಯ ಪ್ರತಿಫಲ 20% ಮತ್ತು ದೀರ್ಘಾವಧಿ ನಿಧಿಯ ಮೇಲಿನ ಸಾಮಾನ್ಯ ಪ್ರತಿಫಲ 18%. ಭವಿಷ್ಯದಲ್ಲಿ ಕಾಪಾಡಿಕೊಳ್ಳಬಹುದಾದ ಲಾಭ (ಬಡ್ಡಿಗೆ ಮೊದಲು) ₹ 76·8 ಲಕ್ಷಗಳು.

ತೊಡಗಿಸಿದ ಬಂಡವಾಳವು

(ಎ) "ಶೇರುದಾರರ ನಿಧಿಯ" ದೃಷ್ಟಿ ಮತ್ತು

(ಬಿ) "ದೀರ್ಘಾವಧಿ ನಿಧಿಯ" ದೃಷ್ಟಿಯನ್ನು

ಆಧರಿಸಿದ್ದಾಗ ನೀವು ಬಂಡವಾಳೀಕರಣ ವಿಧಾನದ ಪ್ರಕಾರ ಸುನಾಮ (goodwill) ದ ಮೌಲ್ಯವನ್ನು ಲೆಕ್ಕ ಹಾಕಬೇಕು.

[Turn over

8. The following particulars relating to the Terminal Process are provided to you :

| | Particulars | Units | ₹ |
|---|---|---|---|
| (i) | Transfer from the previous process at cost | 4,000 | 9,000 |
| (ii) | Transfer to Finished Stock | 3,240 | ? |
| (iii) | Direct wages | – | 2,000 |
| (iv) | Direct materials used | – | 3,000 |

The factory overhead is absorbed @ 400% of the direct materials. Allowance for normal loss is 20% of the units worked. The Scrap Value is ₹ 5 per unit.

You are required to prepare :

(a) Terminal Process Account,

(b) Normal Wastage Account, and

(c) Abnormal Effectiveness Account or Abnormal Loss Account, as the case may be.

9. Mr. X occupied three houses for his self-occupancy. Their particulars for the previous year are given below : (Previous year 2009 – 10)

| Particulars | House X (₹) | House Y (₹) | House Z (₹) |
|---|---|---|---|
| Municipal Value | 3,60,000 | 9,60,000 | 9,50,000 |
| Municipal Taxes paid | 40,000 | 80,000 | 90,000 |
| Fair rent | 5,40,000 | 8,00,000 | 10,00,000 |
| Standard rent | 4,50,000 | 6,00,000 | 9,00,000 |
| Repairs | 1,50,000 | 2,50,000 | 3,00,000 |
| Ground rent paid | 20,000 | 25,000 | 30,000 |
| Insurance Premium paid | 5,000 | 6,000 | 7,000 |
| Interest on loan taken for the purchase of House | 75,000 | 1,20,000 | 2,00,000 |
| Year of the loan | 1997 – 98 | 2000 – 01 | 2005 – 06 |

He has suffered loss in his business, amounting to Rs. 4,00,000.

8. ಅಂತಿಮ ಪ್ರಕ್ರಿಯೆಗೆ ಸಂಬಂಧಿಸಿದ ಈ ಕೆಳಕಂಡ ವಿವರಗಳನ್ನು ನಿಮಗೆ ಒದಗಿಸಲಾಗಿದೆ :

| ವಿವರಗಳು | ಘಟಕಗಳು | ₹ |
|---|---|---|
| (i) ಹಿಂದಿನ ಪ್ರಕ್ರಮದಿಂದ ವೆಚ್ಚದಲ್ಲಿ ವರ್ಗಾವಣೆ | 4,000 | 9,000 |
| (ii) ಸಿದ್ಧ ದಾಸ್ತಾನಿಗೆ ವರ್ಗಾವಣೆ | 3,240 | ? |
| (iii) ಪ್ರತ್ಯಕ್ಷ ಮಜೂರಿ | – | 2,000 |
| (iv) ಬಳಕೆಯಾದ ಪ್ರತ್ಯಕ್ಷ ಸಾಮಗ್ರಿ | – | 3,000 |

ಕಾರ್ಖಾನೆಯ ಮೇಲ್ವೆಚ್ಚವನ್ನು ಪ್ರತ್ಯಕ್ಷ ಸಾಮಗ್ರಿಗಳ 400% ನಂತೆ ಲೀನಗೊಳಿಸಲಾಗಿದೆ. ಸಾಮಾನ್ಯ ನಷ್ಟಗಳಿಗೆ ಕೆಲಸ ನಿರ್ವಹಿಸಿದ ಘಟಕಗಳ 20% ನಂತೆ ಅವಕಾಶ ಒದಗಿಸಿದೆ. ಚೂರುಪಾರಿನ ಮೌಲ್ಯವು ಪ್ರತಿಘಟಕಕ್ಕೆ ₹ 5.

ನೀವು ಈ ಕೆಳಕಂಡದ್ದನ್ನು ತಯಾರಿಸಬೇಕು :

(ಎ) ಅಂತಿಮ ಪ್ರಕ್ರಿಯೆಯ ಲೆಕ್ಕ,

(ಬಿ) ಸಾಮಾನ್ಯ ವೇಸ್ಟೇಜಿನ ಲೆಕ್ಕ, ಮತ್ತು

(ಸಿ) ಅಯಾ ಸಂದರ್ಭಕ್ಕೆ ತಕ್ಕಂತೆ ಅಸಾಮಾನ್ಯ ಪರಿಣಾಮೀ ಲೆಕ್ಕ ಅಥವಾ ಅಸಾಮಾನ್ಯ ನಷ್ಟದ ಲೆಕ್ಕ.

9. X ಎಂಬ ವ್ಯಕ್ತಿ ತನ್ನ ಸ್ವಂತ ಬಳಕೆಗಾಗಿ ಮೂರು ಮನೆಗಳನ್ನು ಇಟ್ಟುಕೊಂಡಿದ್ದಾನೆ. ಹಿಂದಿನ ವರ್ಷಕ್ಕೆ ಸಂಬಂಧಿಸಿದಂತೆ ಇವುಗಳ ವಿವರಗಳನ್ನು ಕೆಳಗೆ ಕೊಡಲಾಗಿದೆ :
(ಹಿಂದಿನ ವರ್ಷ 2009 – 10)

| ವಿವರಗಳು | ಮನೆ X (₹) | ಮನೆ Y (₹) | ಮನೆ Z (₹) |
|---|---|---|---|
| ಮುನಿಸಿಪಲ್ ಮೌಲ್ಯ | 3,60,000 | 9,60,000 | 9,50,000 |
| ಸಂದಾಯ ಮಾಡಿದ ಮುನಿಸಿಪಲ್ ತೆರಿಗೆಗಳು | 40,000 | 80,000 | 90,000 |
| ನ್ಯಾಯಸಮ್ಮತ ಬಾಡಿಗೆ | 5,40,000 | 8,00,000 | 10,00,000 |
| ಸ್ಟ್ಯಾಂಡರ್ಡ್ ಬಾಡಿಗೆ | 4,50,000 | 6,00,000 | 9,00,000 |
| ರಿಪೇರಿಗಳು | 1,50,000 | 2,50,000 | 3,00,000 |
| ಸಂದಾಯ ಮಾಡಿದ ನಿವೇಶನದ ಬಾಡಿಗೆ | 20,000 | 25,000 | 30,000 |
| ಸಂದಾಯ ಮಾಡಿದ ವಿಮಾ ಕಂತು | 5,000 | 6,000 | 7,000 |
| ಮನೆಗಳ ಖರೀದಿಗಾಗಿ ಪಡೆದುಕೊಂಡ ಸಾಲಗಳಿಗೆ ಬಡ್ಡಿ | 75,000 | 1,20,000 | 2,00,000 |
| ಸಾಲ ಪಡೆದ ವರ್ಷ | 1997 – 98 | 2000 – 01 | 2005 – 06 |

ಈತ ತನ್ನ ವ್ಯವಹಾರದಲ್ಲಿ ₹ 4,00,000 ಗಳಷ್ಟು ನಷ್ಟ ಅನುಭವಿಸಿದ್ದಾನೆ.

(a) Compute the taxable income under the head "*Income from House property*" for the A.Y. 2010 – 11 in respect of Mr. X under different options available to him and also his *total income* under the same options.

(b) Advise him about the house to be self-occupied to derive tax benefit.

**10.** From the following project details, calculate the sensitivity of the (a) Project Cost, (b) Annual Cash flow, and (c) Cost of Capital. Which variable is the most sensitive from the viewpoint of financial manager ?

| | |
|---|---|
| Project Cost | ₹ 12,000 |
| Annual Cash flow | ₹ 4,500 |
| Life of the Project | 4 years |
| Cost of Capital | 14% |

The annuity factor at 14% for 4 years is 2·9137 and at 18% for 4 years is 2·667.

**11.** ABC Ltd. has the following capital structure :

| | ₹ in lakhs |
|---|---|
| One million ordinary shares of ₹ 10 each | 100 |
| Reserve and Surplus | 40 |
| 10% Debentures of ₹ 100 each | 60 |
| Total | 200 |

The company needs Rs. 50 lakhs to execute a new project which will raise its operating profit (EBIT) from the current level of ₹ 40 lakhs to ₹ 55 lakhs. It is considering the following options :

(i) Issuing equity shares at a premium of ₹ 15 each for the entire amount.

(ii) Issuing 12% debentures for raising the entire additional amount.

(iii) Raising ₹ 25 lakhs by issuing equity shares at a premium of ₹ 20 per share and the balance amount by issuing 12% debentures.

The company's tax rate is 40%.

(a) Evaluate the three options in terms of EPS.

(b) Advise the company as to which source of finance is preferable.

(ಎ) ಶ್ರೀ X ಗೆ ಸಂಬಂಧಿಸಿದಂತೆ ಅತನಿಗೆ ಲಭ್ಯವಿರುವ ವಿವಿಧ ಆಯ್ಕೆಗಳ ಅಡಿಯಲ್ಲಿ 2010 – 11 ನೇ ವಾರ್ಷಿಕ ಸಾಲಿಗಾಗಿ "ಗೃಹ ಆಸ್ತಿಯಿಂದ ಆದಾಯ" ಎಂಬ ಶೀರ್ಷಿಕೆಯ ಕೆಳಗೆ ತೆರಿಗೆ ವಿಧಿಸಬಹುದಾದ ಆದಾಯವನ್ನು ಲೆಕ್ಕಹಾಕಿ ಮತ್ತು ಇದೇ ಆಯ್ಕೆಗಳ ಅಡಿಯಲ್ಲಿ ಅತನ ಒಟ್ಟು ಆದಾಯವನ್ನು ಲೆಕ್ಕಹಾಕಿ.

(ಬಿ) ತೆರಿಗೆ ಲಾಭಗಳನ್ನು ಪಡೆಯುವುದಕ್ಕಾಗಿ ಅತ ಸ್ವಂತಕ್ಕೆ ಇಟ್ಟುಕೊಳ್ಳಬೇಕಾದ ಮನೆಯಬಗ್ಗೆ ಅತನಿಗೆ ಸಲಹೆ ನೀಡಿ.

**0.** ಈ ಕೆಳಕಂಡ ಪರಿಯೋಜನಾ ವಿವರಗಳಿಂದ (a) ಪರಿಯೋಜನಾ ವೆಚ್ಚ (b) ವಾರ್ಷಿಕ ನಗದುಹರಿವು ಮತ್ತು (c) ಬಂಡವಾಳವೆಚ್ಚದ ಸಂವೇದನಾ ಸಾಮರ್ಥ್ಯವನ್ನು ಲೆಕ್ಕ ಹಾಕಿ. ಹಣಕಾಸು ವ್ಯವಸ್ಥಾಪಕರ ದೃಷ್ಟಿಯಿಂದ ಯಾವ ವ್ಯತ್ಯಾಸನೀಯವು ಅತ್ಯಂತ ಸಂವೇದನಶಾಲಿಯಾಗಿದೆ ?

| | |
|---|---|
| ಪರಿಯೋಜನಾ ವೆಚ್ಚ | ₹ 12,000 |
| ವಾರ್ಷಿಕ ನಗದು ಹರಿವು | ₹ 4,500 |
| ಪರಿಯೋಜನೆಯ ಆಯುಷ್ಯ | 4 ವರ್ಷಗಳು |
| ಬಂಡವಾಳದ ವೆಚ್ಚ | 14% |

ನಾಲ್ಕು ವರ್ಷಗಳಿಗೆ 14% ರಂತೆ ಆ್ಯನುಯಿಟಿ ಅಂಶ 2·9137 ಮತ್ತು ನಾಲ್ಕು ವರ್ಷಗಳಿಗೆ 18% ರಂತೆ 2·667.

**1.** ABC ಲಿಮಿಟೆಡ್‌ನ ಬಂಡವಾಳ ರಚನೆ ಈ ಕೆಳಗಿನಂತಿದೆ :

| | ₹ ಲಕ್ಷಗಳಲ್ಲಿ |
|---|---|
| ಪ್ರತಿಯೊಂದೂ ₹ 10 ಗಳ ಒಂದು ಮಿಲಿಯನ್ ಸಾಮಾನ್ಯ ಶೇರುಗಳು | 100 |
| ಮಿಸಲು ಮತ್ತು ಹೆಚ್ಚುವರಿ | 40 |
| ಪ್ರತಿಯೊಂದು ₹ 100 ಗಳ 10% ಸಾಲ ಪತ್ರಗಳು | 60 |
| ಒಟ್ಟು | 200 |

ಒಂದು ಹೊಸ ಪರಿಯೋಜನೆಯನ್ನು ಪ್ರಾರಂಭಿಸುವುದಕ್ಕಾಗಿ ಕಂಪನಿಗೆ ₹ 50 ಲಕ್ಷ ಅಗತ್ಯವಾಗಿದ್ದು, ಇದರಿಂದಾಗಿ ಅದರ ಕಾರ್ಯಾಚರಣಾ ಲಾಭವು (EBIT) ಈಗಿನ ₹ 40 ಲಕ್ಷ ಮಟ್ಟದಿಂದ ₹ 55 ಲಕ್ಷಗಳಿಗೆ ಏರಿಕೆಯಾಗಲಿದೆ. ಅದು ಈ ಕೆಳಕಂಡ ಮಾರ್ಗಗಳನ್ನು ಪರಿಶೀಲಿಸುತ್ತಿದೆ :

(i) ಈ ಇಡೀ ಮೊತ್ತಕ್ಕಾಗಿ ಪ್ರತಿಯೊಂದಕ್ಕೂ ₹ 15 ಪ್ರೀಮಿಯಂನಂತೆ ಈಕ್ವಿಟಿ ಶೇರುಗಳನ್ನು ಬಿಡುಗಡೆ ಮಾಡುವುದು.

(ii) ಈ ಇಡೀ ಹೆಚ್ಚುವರಿ ಮೊತ್ತ ಸಂಗ್ರಹಿಸಲು, 12% ಸಾಲಪತ್ರಗಳನ್ನು ಬಿಡುಗಡೆ ಮಾಡುವುದು.

(iii) ಪ್ರತಿಯೊಂದು ಶೇರಿಗೂ ₹ 20 ಪ್ರೀಮಿಯಂನಂತೆ ಈಕ್ವಿಟಿ ಶೇರುಗಳ ಬಿಡುಗಡೆಯ ಮೂಲಕ ₹ 25 ಲಕ್ಷ ಸಂಗ್ರಹಿಸುವುದು ಮತ್ತು ಉಳಿದ ಮೊತ್ತವನ್ನು 12% ಸಾಲಪತ್ರಗಳ ಬಿಡುಗಡೆಯ ಮೂಲಕ ಸಂಗ್ರಹಿಸುವುದು.

ಕಂಪನಿಯ ತೆರಿಗೆ ದರವು 40% ಆಗಿದೆ.

(ಎ) EPS ದೃಷ್ಟಿಯಿಂದ ಈ ಮೂರೂ ಮಾರ್ಗಗಳ ಮೌಲ್ಯ ಮಾಪನ ಮಾಡಿ.

(ಬಿ) ಯಾವ ವಿಧದ ಹಣಕಾಸು ಮೂಲವು ಒಳ್ಳೆಯದು ಎಂಬ ಬಗ್ಗೆ ಕಂಪನಿಗೆ ಸಲಹೆ ನೀಡಿ.

## PART C

6×15=9

*Answer each theory question in about 150 words. Each question carries 15 marks.*

**12.** Describe the variables affecting the levels of different components of working capital.

**13.** Explain the steps involved in the conduct of a bank audit.

**14.** H. Ltd. acquired 20,000 shares of ₹ 100 each on 31st December, 2009. The summarised balance sheets of H. Ltd. and S. Ltd. as at 31st December, 2009 were as follows :

| Liabilities | H. Ltd. ₹ | S. Ltd. ₹ | Assets | H. Ltd. ₹ | S. Ltd. ₹ |
|---|---|---|---|---|---|
| Equity shares of ₹ 100 each | 80,00,000 | 25,00,000 | Fixed Assets | 70,00,000 | 25,00,000 |
| Reserves | 30,00,000 | 5,00,000 | Current Assets | 40,00,000 | 20,00,000 |
| P & L A/c | 10,00,000 | 10,00,000 | Investments (20,000 shares in S. Ltd.) | 30,00,000 | – |
| Creditors | 20,00,000 | 5,00,000 | | | |
| Total | 1,40,00,000 | 45,00,000 | Total | 1,40,00,000 | 45,00,000 |

S. Ltd. had the credit balance of ₹ 5,00,000 in reserves and ₹ 2,00,000 in the P & L A/c when H. Ltd. acquired the shares in S. Ltd. S. Ltd. issued bonus shares @ 1 for every 5 shares held out of post-acquisition profits.

(a) Calculate the Cost of Control before the issue of bonus shares.

(b) Calculate the Cost of Control after the issue of bonus.

(c) Prepare the Consolidated Balance Sheet after the issue of bonus shares.

## ಭಾಗ C

*6×15=90*

*ಪ್ರತಿಯೊಂದು ಸಿದ್ಧಾಂತರೂಪದ (theory) ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

**12.** ಕಾರ್ಯ ಬಂಡವಾಳದ ವಿವಿಧ ಘಟಕಾಂಶ ಮಟ್ಟಗಳ ಮೇಲೆ ಪ್ರಭಾವ ಬೀರುವ ಚರಾಂಶ (variable) ಗಳನ್ನು ವಿವರಿಸಿ.

**13.** ಒಂದು ಬ್ಯಾಂಕಿನ ಲೆಕ್ಕಪರಿಶೋಧನೆ ನಿರ್ವಹಿಸುವುದಕ್ಕೆ ಸಂಬಂಧಿಸಿದ ಹಂತಗಳನ್ನು ವಿವರಿಸಿ.

**14.** H ಲಿಮಿಟೆಡ್, ಪ್ರತಿಯೊಂದೂ ₹ 100 ಗಳ 20,000 ಶೇರುಗಳನ್ನು 2009 ರ ಡಿಸೆಂಬರ್ 31 ರಂದು ಪಡೆದುಕೊಂಡಿದೆ. H ಲಿಮಿಟೆಡ್ ಮತ್ತು S ಲಿಮಿಟೆಡ್‌ಗಳ ಸಾರಾಂಶ ರೂಪದ ಸಂತುಲನ ಪಟ್ಟಿಗಳು 2009 ರ ಡೆಸೆಂಬರ್ 31 ರಲ್ಲಿ ಈ ಕೆಳಗಿನಂತಿವೆ :

| ಹೊಣೆಗಾರಿಕೆಗಳು | H ಲಿಮಿಟೆಡ್ ₹ | S ಲಿಮಿಟೆಡ್ ₹ | ಸ್ವತ್ತುಗಳು | H ಲಿಮಿಟೆಡ್ ₹ | S ಲಿಮಿಟೆಡ್ ₹ |
|---|---|---|---|---|---|
| ಪ್ರತಿಯೊಂದು ₹ 100 ಗಳ ಈಕ್ವಿಟಿ ಶೇರುಗಳು | 80,00,000 | 25,00,000 | ಸ್ಥಿರ ಸ್ವತ್ತುಗಳು | 70,00,000 | 25,00,000 |
| ಮಿಸಲುಗಳು | 30,00,000 | 5,00,000 | ಚಾಲ್ತಿ ಸ್ವತ್ತುಗಳು | 40,00,000 | 20,00,000 |
| ಲಾಭ ಮತ್ತು ನಷ್ಟದ ಲೆಕ್ಕ | 10,00,000 | 10,00,000 | ಹೂಡಿಕೆಗಳು S ಲಿಮಿಟೆಡ್‌ನಲ್ಲಿ (20,000 ಶೇರುಗಳು) | 30,00,000 | — |
| ಸಾಲಿಗರು | 20,00,000 | 5,00,000 | | | |
| ಒಟ್ಟು | 1,40,00,000 | 45,00,000 | ಒಟ್ಟು | 1,40,00,000 | 45,00,000 |

H ಲಿಮಿಟೆಡ್, S ಲಿಮಿಟೆಡ್‌ನ ಶೇರುಗಳನ್ನು ಪಡೆದುಕೊಂಡಾಗ S ಲಿಮಿಟೆಡ್ ₹ 5,00,000 ಗಳ ಸಾಲ ಶಿಲ್ಕನ್ನು ಮೀಸಲುಗಳಲ್ಲಿ, ಮತ್ತು ₹ 2,00,000 ಗಳನ್ನು ಲಾಭ ಮತ್ತು ನಷ್ಟ ಲೆಕ್ಕದಲ್ಲಿ ಹೊಂದಿತ್ತು. ಹೊಂದಿದ್ದ ಪ್ರತಿ 5 ಶೇರುಗಳಿಗೆ 1 ರಂತೆ S ಲಿಮಿಟೆಡ್ ಬೋನಸ್ ಶೇರುಗಳನ್ನು ತನ್ನ ಗಳಿಕೆಯೋತ್ತರದ ಲಾಭಗಳಿಂದ ನೀಡಿತು.

(ಎ) ಬೋನಸ್ ಶೇರುಗಳ ನೀಡಿಕೆಗೆ ಮೊದಲು ನಿಯಂತ್ರಣದ ವೆಚ್ಚವನ್ನು ಲೆಕ್ಕಹಾಕಿ.

(ಬಿ) ಬೋನಸ್ ನೀಡಿಕೆಯ ನಂತರ ನಿಯಂತ್ರಣದ ವೆಚ್ಚವನ್ನು ಲೆಕ್ಕಹಾಕಿ.

(ಸಿ) ಬೋನಸ್ ಶೇರುಗಳ ನೀಡಿಕೆಯ ನಂತರದಲ್ಲಿ ಕ್ರೋಢೀಕೃತ ಸಂತುಲನ ಪಟ್ಟಿಯನ್ನು ತಯಾರಿಸಿ.

**15.** Modern Ltd. wants to buy a new machine to replace the old one. It has received two offers for two models $M_1$ & $M_2$. Further details regarding these two models are given below :

| Particulars | $M_1$ | $M_2$ |
|---|---|---|
| Installed capacity (units) | 10,000 | 10,000 |
| Fixed overhead per annum (₹) | 2,40,000 | 1,00,000 |
| Estimated profit at the above capacity (₹) | 1,60,000 | 1,00,000 |

The product manufactured by using either $M_1$ or $M_2$ can be sold at ₹ 100 per unit.

*Required :*

(a) Compute the break-even level of sales for each model.

(b) Determine the level of sales at which both the models will earn the same profit.

(c) Determine the model suitable for different levels of demand for the product.

**16.** Majestic Auto Ltd. is manufacturing and selling three standard products. The company has adopted Standard Costing System and analyses the variances between the budget and the actual periodically.

The summarised working results for the year 2009 – 10 were as follows :

| Product | Budget | | | Actual | | |
|---|---|---|---|---|---|---|
| | Selling price per unit (₹) | Cost per unit (₹) | Qty. sold (units) | Selling price per unit (₹) | Cost per unit (₹) | Qty. sold (units) |
| A | 50 | 32 | 10,000 | 48 | 30 | 12,000 |
| B | 40 | 24 | 14,000 | 42 | 25 | 12,000 |
| C | 30 | 18 | 16,000 | 31 | 20 | 15,000 |

You are required to :

(a) Compute the variance in profit during the period.

(b) Also compute sales margin price variance, sales margin volume variance, sales margin-mix variance & sales margin quantity variance.

**15.** ಮಾಡರ್ನ್ ಲಿಮಿಟೆಡ್ ಸಂಸ್ಥೆಯು ತನ್ನ ಹಳೆಯ ಯಂತ್ರಕ್ಕೆ ಬದಲಾಗಿ ಹೊಸ ಯಂತ್ರವನ್ನು ಕೊಳ್ಳಲು ಬಯಸಿದೆ. $M_1$ ಮತ್ತು $M_2$ ಎಂಬ ಎರಡು ಮಾದರಿಗಳಿಗಾಗಿ ಅದಕ್ಕೆ ಎರಡು ಪ್ರಸ್ತಾಪಗಳು ಬಂದಿವೆ. ಈ ಎರಡು ಮಾದರಿಗಳಿಗೆ ಸಂಬಂಧಿಸಿದ ಇನ್ನಷ್ಟು ವಿವರಗಳನ್ನು ಈ ಕೆಳಗೆ ಕೊಡಲಾಗಿದೆ :

| ವಿವರಗಳು | $M_1$ | $M_2$ |
|---|---|---|
| ಸ್ಥಾಪಿತ ಸಾಮರ್ಥ್ಯ (ಏಕಮಾನಗಳು) | 10,000 | 10,000 |
| ಪ್ರತಿ ವರ್ಷಕ್ಕೆ ನಿಶ್ಚಿತ ಮೇಲ್ವೆಚ್ಚ (₹) | 2,40,000 | 1,00,000 |
| ಮೇಲ್ಕಂಡ ಸಾಮರ್ಥ್ಯದ ಪ್ರಕಾರ ಅಂದಾಜಿನ ಲಾಭ (₹) | 1,60,000 | 1,00,000 |

$M_1$ ಅಥವಾ $M_2$ ಬಳಸಿ ತಯಾರಿಸಿದ ಉತ್ಪನ್ನವನ್ನು ಪ್ರತಿ ಏಕಮಾನಕ್ಕೆ ₹ 100 ರಂತೆ ಮಾರಾಟಮಾಡಬಹುದು.

ನೀವು ಮಾಡಬೇಕಿರುವುದು :

(ಎ) ಈ ಪ್ರತಿಯೊಂದೂ ಮಾದರಿಗೆ, ಮಾರಾಟದ ಲಾಭನಷ್ಟರಹಿತ ಮಟ್ಟವನ್ನು ಲೆಕ್ಕ ಹಾಕಿ.

(ಬಿ) ಈ ಎರಡೂ ಮಾದರಿಗಳು ಒಂದೇ ರೀತಿಯ ಲಾಭವನ್ನು ಗಳಿಸುವಂಥ ಮಾರಾಟದ ಮಟ್ಟ ಯಾವುದು ಕಂಡುಹಿಡಿಯಿರಿ.

(ಸಿ) ಉತ್ಪನ್ನಕ್ಕೆ ಬೇರೆ ಬೇರೆ ಮಟ್ಟದ ಬೇಡಿಕೆ ಇದ್ದರೆ ಯಾವ ಮಾದರಿ ಸೂಕ್ತ ಎಂಬುದನ್ನು ನಿರ್ಧರಿಸಿ.

**16.** ಮೆಜೆಸ್ಟಿಕ್ ಆಟೋ ಲಿಮಿಟೆಡ್ ಸಂಸ್ಥೆಯು ಮೂರು ಸ್ಟ್ಯಾಂಡರ್ಡ್ ಉತ್ಪನ್ನಗಳನ್ನು ತಯಾರಿಸುತ್ತಿದೆ ಮತ್ತು ಮಾರಾಟ ಮಾಡುತ್ತದೆ. ಕಂಪನಿಯು ಸ್ಟ್ಯಾಂಡರ್ಡ್ ವೆಚ್ಚ ನಿರ್ಣಯ ಪದ್ಧತಿಯನ್ನು ಅಳವಡಿಸಿಕೊಂಡಿದ್ದು, ಬಜೆಟ್ ಮತ್ತು ವಾಸ್ತವಿಕತೆಯ ನಡುವಿನ ವ್ಯತ್ಯಾಸಗಳನ್ನು ನಿಯತಕಾಲಿಕವಾಗಿ ವಿಶ್ಲೇಷಿಸುತ್ತದೆ.

2009 – 10 ರ ಸಾಲಿಗಾಗಿ ಸಾರಾಂಶರೂಪದ ಕಾರ್ಯ ನಿರ್ವಹಣಾ ಫಲಿತಾಂಶಗಳು ಈ ಕೆಳಗಿನಂತಿದ್ದವು :

| ಉತ್ಪನ್ನ | ಬಜೆಟ್ | | | ವಾಸ್ತವಿಕ | | |
|---|---|---|---|---|---|---|
| | ಪ್ರತಿ ಏಕಮಾನದ ಮಾರಾಟ ಬೆಲೆ ₹ | ಪ್ರತಿ ಏಕಮಾನದ ವೆಚ್ಚ ₹ | ಮಾರಾಟ ಮಾಡಿದ ಪರಿಮಾಣ (ಏಕಮಾನಗಳು) | ಪ್ರತಿ ಏಕಮಾನದ ಮಾರಾಟ ಬೆಲೆ ₹ | ಪ್ರತಿ ಏಕಮಾನದ ವೆಚ್ಚ ₹ | ಮಾರಾಟ ಮಾಡಿದ ಪರಿಮಾಣ |
| A | 50 | 32 | 10,000 | 48 | 30 | 12,000 |
| B | 40 | 24 | 14,000 | 42 | 25 | 12,000 |
| C | 30 | 18 | 16,000 | 31 | 20 | 15,000 |

ನೀವು ಮಾಡಬೇಕಿರುವುದು :

(ಎ) ಈ ಅವಧಿಯಲ್ಲಿನ ವ್ಯತ್ಯಾಸಿಯನ್ನು ಲೆಕ್ಕ ಹಾಕಿ.

(ಬಿ) ಮಾರಾಟ ಮಾರ್ಜಿನ್ನಿನ ಬೆಲೆ ವ್ಯತ್ಯಾಸಿ, ಮಾರಾಟ ಮಾರ್ಜಿನ್ನಿನ ಗಾತ್ರ ವ್ಯತ್ಯಾಸಿ, ಮಾರಾಟ ಮಾರ್ಜಿನ್ನಿನ ಮಿಶ್ರ ವ್ಯತ್ಯಾಸಿ ಮತ್ತು ಮಾರಾಟ ಮಾರ್ಜಿನ್ನಿನ ಪರಿಮಾಣ ವ್ಯತ್ಯಾಸಿಯನ್ನು ಸಹ ಲೆಕ್ಕ ಹಾಕಿ.

[Turn over

**17.** The following is the Balance Sheet of Popular Ltd.

| Liabilities | ₹ in lakhs | Assets | | ₹ in lakhs |
|---|---|---|---|---|
| Equity Shares of ₹ 10 each | 400 | Fixed Assets<br>Current Assets (₹ in lakhs) : | | 1,000 |
| Retained Earnings | 400 | Raw materials | 200 | |
| 11% Debentures | 600 | WIP | 300 | |
| Public Deposits | 200 | Finished goods | 150 | |
| Creditors | 160 | Debtors | 200 | |
| Bills payable | 200 | Cash-at-Bank | 110 | 960 |
| | 1,960 | | | 1,960 |

Assume the level of core Current Assets to be ₹ 60 lakhs.

(a) Calculate the amount of maximum permissible bank finance (MPBF) as per all the three methods as suggested in the Tandon Committee.

(b) Calculate the Current Ratio under each method of financing as recommended by the Tandon Committee, assuming that the bank has granted MPBF.

7. ಈ ಕೆಳಗೆ, ಪಾಪ್ಯುಲರ್ ಲಿಮಿಟೆಡ್‌ನ ಸಂತುಲನ ಪಟ್ಟಿಯನ್ನು ಕೊಡಲಾಗಿದೆ :

| ಹೊಣೆಗಾರಿಕೆಗಳು | ₹ ಲಕ್ಷಗಳಲ್ಲಿ | ಸ್ವತ್ತುಗಳು | | ₹ ಲಕ್ಷಗಳಲ್ಲಿ |
|---|---|---|---|---|
| ್ರತಿಯೊಂದು ₹ 10 ಗಳ ಈಕ್ವಿಟಿ ಶೇರುಗಳು | 400 | ಸ್ಥಿರ ಸ್ವತ್ತುಗಳು | | 1,000 |
| ಂಡಿದಿರಿಸಿದ ಗಳಿಕೆಗಳು | 400 | *ಚಾಲ್ತಿ ಸ್ವತ್ತುಗಳು (₹ ಲಕ್ಷಗಳಲ್ಲಿ) :* | | |
| 1% ಸಾಲಪತ್ರಗಳು | 600 | ಕಚ್ಚಾ ಸಾಮಗ್ರಿಗಳು | 200 | |
| ಾರ್ವಜನಿಕ ಠೇವಣಿಗಳು | 200 | WIP | 300 | |
| ಾಲಿಗರು | 160 | ಸಿದ್ಧ ಸರಕುಗಳು | 150 | |
| ಂದಾಯ ಮಾಡಬೇಕಾದ ಬಿಲ್‌ಗಳು | 200 | ಋಣದಾತರು | 200 | |
| | | ಬ್ಯಾಂಕಿನಲ್ಲಿ ನಗದು | 110 | 960 |
| | 1,960 | | | 1,960 |

ಮುಖ್ಯ ಚಾಲ್ತಿ ಸ್ವತ್ತುಗಳ ಮಟ್ಟವು 60 ಲಕ್ಷ ರೂ. ಎಂದು ಭಾವಿಸಿಕೊಳ್ಳಿ :

(ಎ) ಟಂಡನ್ ಸಮಿತಿಯಲ್ಲಿ ಸೂಚಿಸಿರುವ ಪ್ರಕಾರ ಎಲ್ಲ ಮೂರು ವಿಧಾನಗಳ ಪ್ರಕಾರ, ಗರಿಷ್ಟ ಎಷ್ಟು ಹಣವನ್ನು ಬ್ಯಾಂಕಿನಿಂದ ಒದಗಿಸಲು ಅನುಮತಿ ಇದೆ (MPBF) ಎಂಬುದನ್ನು ಲೆಕ್ಕಹಾಕಿ.

(ಬಿ) ಬ್ಯಾಂಕು MPBF ಅನ್ನು ಅನುಗ್ರಹಿಸಿದೆ ಎಂದು ಭಾವಿಸಿಕೊಂಡು, ಟಂಡನ್ ಸಮಿತಿ ಶಿಫಾರಸು ಮಾಡಿದ ಪ್ರಕಾರ, ಪ್ರತಿಯೊಂದು ವಿಧದ ಹಣಕಾಸು ಒದಗಣೆಯ ಕೆಳಗೆ ಚಾಲ್ತಿ ಅನುಪಾತವನ್ನು ಲೆಕ್ಕಹಾಕಿ.

## PART D

3×30=90

*Answer any **three** of the following questions, (each theory question in about 300 words). Each question carries 30 marks.*

**18.** Narrate the points to be kept in mind by auditor while verifying the following :

(a) Goodwill

(b) Patents & Copyrights

(c) Share Capital

**19.** Critically examine the situations in which the IRR and the NPV techniques of capital budgeting would give contradictory results. Explain how do you resolve them.

**20.** The Balance Sheet of Uptodate Ltd. as on $31^{st}$ December, 2008 and the Profit & Loss Account for the year ended 31.12.2009 were as under :

***Balance Sheet as on $31^{st}$ December, 2008***

| Liabilities | ₹ | Assets | ₹ |
|---|---|---|---|
| Share capital | 40,000 | Plant & Machinery | 60,000 |
| 13·5% Debentures | 24,000 | Stock | 9,600 |
| Sundry Creditors | 14,400 | Debtors | 4,800 |
| | | Cash | 4,000 |
| | 78,400 | | 78,400 |

***Profit & Loss A/c for the year ended 31·12·2009.***

| | ₹ | | ₹ |
|---|---|---|---|
| To Opening Stock | 9,600 | By Sales | 40,000 |
| To Purchases | 18,400 | By Closing Stock | 8,000 |
| To Gross Profit | 20,000 | | 48,000 |
| | 48,000 | | |
| To Expenses | 3,200 | | |
| To Interest on Debentures | 3,240 | By Gross Profit | 20,000 |
| To Depreciation | 6,000 | | |
| To Net Profit | 7,560 | | |
| | 20,000 | | 20,000 |

— —

## ಭಾಗ D

*3×30=90*

*ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಸಿದ್ಧಾಂತರೂಪದ (theory) ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

**18.** ಈ ಕೆಳಕಂಡವುಗಳನ್ನು ತಾಳೆ ನೋಡುವಾಗ ಲೆಕ್ಕಪರಿಶೋಧಕರು ಗಮನದಲ್ಲಿಟ್ಟು ಕೊಳ್ಳಬೇಕಾದ ಅಂಶಗಳೇನು ಎಂಬುದನ್ನು ತಿಳಿಸಿ :

(ಎ) ಸುನಾಮ

(ಬಿ) ಪೇಟೆಂಟ್‌ಗಳು ಮತ್ತು ಕಾಪಿರೈಟ್‌ಗಳು

(ಸಿ) ಶೇರು ಬಂಡವಾಳ

**19.** ಬಂಡವಾಳ ಬಜೆಟಿಂಗ್‌ನ IRR ಮತ್ತು NPV ವಿಧಾನಗಳು ಪರಸ್ಪರ ವಿರೋಧಿಯಾದ ಫಲಿತಾಂಶಗಳನ್ನು ನೀಡುವಂತಹ ಪರಿಸ್ಥಿತಿಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ. ಈ ಸಮಸ್ಯೆಯನ್ನು ಹೇಗೆ ನಿವಾರಿಸಿಕೊಳ್ಳುತ್ತೀರಿ ಎಂಬುದನ್ನು ವಿವರಿಸಿ.

**20.** 2008 ರ ಡಿಸೆಂಬರ್ 31ರಲ್ಲಿದ್ದಂತೆ ಅಪ್‌ಟುಡೇಟ್ ಲಿ. ನ ಸಂತುಲನ ಪಟ್ಟಿ ಹಾಗೂ 31.12.2009 ಕ್ಕೆ ಕೊನೆಯಾದ ವರ್ಷದ ಲಾಭ ಮತ್ತು ನಷ್ಟದಲೆಕ್ಕಗಳು ಈ ಕೆಳಗಿನಂತಿದ್ದವು :

**2008 ರ ಡಿಸೆಂಬರ್ 31 ರಂದು ಇದ್ದಂತೆ ಸಂತುಲನ ಪಟ್ಟಿ**

| ಹೊಣೆಗಾರಿಕೆಗಳು | ₹ | ಸ್ವತ್ತುಗಳು | ₹ |
|---|---|---|---|
| ಶೇರು ಬಂಡವಾಳ | 40,000 | ಸ್ಥಾವರ ಮತ್ತು ಯಂತ್ರಸಾಮಗ್ರಿ | 60,000 |
| 13·5% ಸಾಲಪತ್ರಗಳು | 24,000 | ದಾಸ್ತಾನು | 9,600 |
| ಸಣ್ಣಪುಟ್ಟ ಸಾಲಿಗರು | 14,400 | ಋಣದಾತರು | 4,800 |
| | | ನಗದು | 4,000 |
| | 78,400 | | 78,400 |

**31.12.2009 ಕ್ಕೆ ಕೊನೆಯಾದ ವರ್ಷಕ್ಕೆ ಲಾಭ ಮತ್ತು ನಷ್ಟದ ಲೆಕ್ಕ**

| | ₹ | | ₹ |
|---|---|---|---|
| ಆರಂಭದ ದಾಸ್ತಾನಿಗೆ | 9,600 | ಮಾರಾಟಗಳಿಂದ | 40,000 |
| ಖರೀದಿಗಳಿಗೆ | 18,400 | ಮುಕ್ತಾಯ ದಾಸ್ತಾನಿನಿಂದ | 8,000 |
| ಒಟ್ಟು ಲಾಭಗಳಿಗೆ | 20,000 | | 48,000 |
| | 48,000 | ಒಟ್ಟು ಲಾಭದಿಂದ | 20,000 |
| ಖರ್ಚುಗಳಿಗೆ | 3,200 | | |
| ಸಾಲಪತ್ರಗಳ ಮೇಲಿನ ಬಡ್ಡಿಗೆ | 3,240 | | |
| ಸವಕಳಿಗೆ | 6,000 | | |
| ನಿವ್ವಳ ಲಾಭಕ್ಕೆ | 7,560 | | |
| | 20,000 | | 20,000 |

**22.** PQR Ltd. makes a single product which sells for ₹ 30 per unit and there is great demand for the product.

The Variable Cost of the product is ₹ 16 as detailed below :

| | ₹ |
|---|---|
| Direct material | 8 |
| Direct Labour (2 hrs) | 4 |
| Variable overhead | 4 |
| Total | 16 |

The labour force is currently working at full capacity and no extra time can be made available. One customer has approached the company with a request for the manufacture of a special order at ₹ 8,000.

The cost of the order would be ₹ 3,000 for direct materials and 600 labour hours will be required and the variable overhead per hour shall be ₹ 2.

Should the order be accepted ?

If yes, why ?

If not, why ?

Provide the necessary numerical workings in support of your answer.

**22.** PQR ಲಿ. ಒಂದೇ ಒಂದು ರೀತಿಯ ಉತ್ಪನ್ನವನ್ನು ತಯಾರಿಸುತ್ತಿದೆ ಮತ್ತು ₹ 30 ಗಳಿಗೆ ಒಂದರಂತೆ ತನ್ನ ಉತ್ಪನ್ನವನ್ನು ಮಾರುತ್ತಿದೆ. ಈ ಉತ್ಪನ್ನಕ್ಕೆ ಬಹಳ ಬೇಡಿಕೆ ಇದೆ.

ಈ ಕೆಳಗೆ ವಿವರಿಸಿರುವಂತೆ ಉತ್ಪನ್ನದ ಚರಾಂಶ ವೆಚ್ಚವು ₹ 16 ಆಗಿದೆ :

| | ₹ |
|---|---|
| ಪ್ರತ್ಯಕ್ಷಸಾಮಗ್ರಿ | 8 |
| ಪ್ರತ್ಯಕ್ಷ ದುಡಿಮೆ (2 ಗಂಟೆ) | 4 |
| ವ್ಯತ್ಯಾಸನೀಯ ಮೇಲ್ವೆಚ್ಚ | 4 |
| ಒಟ್ಟು | 16 |

ಕಾರ್ಮಿಕ ಬಲವು ಪ್ರಸ್ತುತದಲ್ಲಿ ಪೂರ್ಣ ಸಾಮರ್ಥ್ಯದ ಪ್ರಕಾರ ಕೆಲಸ ಮಾಡುತ್ತಿದ್ದು ಯಾವುದೇ ಹೆಚ್ಚುವರಿ ಕಾಲವನ್ನು ಕೊಡಲು ಸಾಧ್ಯವಿಲ್ಲ. ಒಬ್ಬ ಗ್ರಾಹಕರು ಕಂಪನಿಯನ್ನು ಸಂಪರ್ಕಿಸಿ ₹ 8,000 ಗಳ ವಿಶೇಷ ಆದೇಶ ನೀಡುವ ಕೋರಿಕೆ ಸಲ್ಲಿಸುತ್ತಾರೆ.

ಈ ಆದೇಶದ ಪ್ರಕಾರ, ಪ್ರತ್ಯಕ್ಷ ಸಾಮಗ್ರಿಯ ವೆಚ್ಚವು ₹ 3,000, ಮತ್ತು 600 ಕಾರ್ಮಿಕ ಗಂಟೆಗಳು ಅಗತ್ಯ ಮತ್ತು ಪ್ರತಿ ಗಂಟೆಗೆ ವ್ಯತ್ಯಾಸನೀಯ ಮೇಲ್ವೆಚ್ಚವು ₹ 2 ಆಗುತ್ತದೆ.

ಈ ಆದೇಶವನ್ನು ಸ್ವೀಕರಿಸಬೇಕೆ ?

ಹೌದಾದರೆ ಯಾಕೆ ?

ಅಲ್ಲವೆಂದಾದರೆ ಯಾಕೆ ?

ನಿಮ್ಮ ಉತ್ತರಕ್ಕೆ ಸಮರ್ಥನೆಯಾಗಿ ಅಗತ್ಯವಾದ ಸಂಖ್ಯಾತ್ಮಕ ಲೆಕ್ಕಾಚಾರಗಳನ್ನು ಒದಗಿಸಿ.

06/1

# 2010

# ವಾಣಿಜ್ಯಶಾಸ್ತ್ರ ಮತ್ತು ಲೆಕ್ಕಪಾಲನೆ

## ಪ್ರಶ್ನೆಪತ್ರಿಕೆ 1

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 300*

SEAL

**ಸೂಚನೆಗಳು**

*ಪ್ರತಿ ಪ್ರಶ್ನೆಯನ್ನು ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಮುದ್ರಿಸಲಾಗಿದೆ.*

*ನಿಮ್ಮ ಪ್ರವೇಶ ಪತ್ರದಲ್ಲಿ ನಮೂದಿಸಿರುವ ಮಾಧ್ಯಮದಲ್ಲೇ (ಇಂಗ್ಲೀಷ್ ಅಥವಾ ಕನ್ನಡ) ನೀವು ಉತ್ತರಗಳನ್ನು ಬರೆಯತಕ್ಕದ್ದು; ಇದನ್ನು ಉತ್ತರ ಪತ್ರಿಕೆಯ ಮುಖಪುಟದಲ್ಲಿ ಪ್ರತ್ಯೇಕವಾಗಿ ನೀಡಲಾದ ಜಾಗದಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು. ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಸಂದೇಹ ಉಂಟಾದಲ್ಲಿ, ಇಂಗ್ಲೀಷ್ ಪ್ರಶ್ನೆಪತ್ರಿಕೆಯನ್ನು ದಯವಿಟ್ಟು ಗಮನಿಸಿ.*

*ಈ ಪ್ರಶ್ನೆಪತ್ರಿಕೆಯಲ್ಲಿ ನಾಲ್ಕು ಭಾಗಗಳಿವೆ :*

| | |
|---|---|
| **A** | 20 ಅಂಕಗಳು |
| **B** | 100 ಅಂಕಗಳು |
| **C** | 90 ಅಂಕಗಳು |
| **D** | 90 ಅಂಕಗಳು |

*ಪ್ರತಿ ಪ್ರಶ್ನೆಗೂ ನಿಗದಿಸಲಾದ ಅಂಕಗಳನ್ನು ಒಂದೊಂದು ಭಾಗದಲ್ಲಿಯೂ ನಮೂದಿಸಲಾಗಿದೆ.*

*ಭಾಗ A, B ಮತ್ತು C ಯಲ್ಲಿನ ಎಲ್ಲ ಪ್ರಶ್ನೆಗಳನ್ನು ಕಡ್ಡಾಯವಾಗಿ ಉತ್ತರಿಸಿ.*
*ಭಾಗ D ಯಲ್ಲಿಯ ಯಾವುದಾದರೂ ಮೂರು ಪ್ರಶ್ನೆಗಳನ್ನು ಉತ್ತರಿಸಿ.*

***Note :*** *The English version of the instructions is printed on th of this question paper.*

06/2

# 2010

## COMMERCE AND ACCOUNTANCY

### Paper 2

*Time : 3 Hours ]* *[ Maximum Marks : 300*

---

**INSTRUCTIONS**

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* **compulsory***.*
*Answer any* ***three*** *questions in Part D.*

SEAL

---

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ಭಾಷಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

## PART A

*4×5=20*

*Answer each question in about 50 words. Each question carries 5 marks.*

1. (a) What is Span of Control ? Explain with an example.

   (b) Define Organisational Behaviour. Explain its scope.

   (c) What do you mean by 'Executive Development' ? State its strategic role.

   (d) What is a virtual organisation ?

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

**1.** (ಎ) ನಿಯಂತ್ರಣದ ಹರವು ಎಂದರೇನು ? ಒಂದು ಉದಾಹರಣೆಯೊಂದಿಗೆ ವಿವರಿಸಿ.

(ಬಿ) ಸಂಸ್ಥಾ ನಡವಳಿಕೆ ಎಂದರೇನು ? ಇದರ ವ್ಯಾಪ್ತಿಯನ್ನು ವಿವರಿಸಿ.

(ಸಿ) 'ಕಾರ್ಯ ನಿರ್ವಾಹಕ ಅಭಿವೃದ್ಧಿ' ಎಂದರೇನು ? ಇದರ ಆಯಕಟ್ಟಿನ ಪಾತ್ರವನ್ನು ನಿರೂಪಿಸಿ.

(ಡಿ) ಕಾರ್ಯತ: ಸಂಸ್ಥೆ (Virtual Organisation) ಎಂದರೇನು ?

[Turn over

## PART B

*10×10=100*

*Answer each question in about 100 words. Each question carries 10 marks.*

2. What is an ESOP ? How might it positively influence employee motivation ?

3. Define power. Where does power come from ? Explain.

4. Compare and contrast Tall and Flat organisational structures.

5. " 'Johari Window' is a tool for analysing interpersonal conflict." Discuss.

6. What is an Organisational Development (O.D.) ? What O.D. techniques do you advocate to help managers

   (a) unfreeze an organisation and overcome resistance to change; and

   (b) change and refreeze an organisation ?

7. Define Quality Circles. Explain their significance.

8. What is a personnel audit ? State the reasons for such an audit.

9. What is a 'Trade Union' as per the provisions of the Trade Unions Act, 1926 ? Explain the objectives of trade unions.

10. Discuss the role of Worker's Participation in Management (WPM).

11. "Personnel Research improves the quality of personnel policies and practices." Discuss.

## ಭಾಗ B

*10×10=100*

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

**2.** ESOP ಎಂದರೇನು ? ಉದ್ಯೋಗೀ ಅಭಿಪ್ರೇರಣೆಯನ್ನು ಇದು ಯಾವರೀತಿ ಇತ್ಯಾತ್ಮಕವಾಗಿ ಪ್ರಭಾವಿಸಬಹುದು ?

**3.** ಅಧಿಕಾರ ಎಂದರೇನು ? ಅಧಿಕಾರ ಎಲ್ಲಿಂದ ಬರುತ್ತದೆ ? ವಿವರಿಸಿ.

**4.** ಕಡಿಮೆ ನಿಯಂತ್ರಣ ಹರವಿನ ಸಂಸ್ಥಾ ರಚನೆಗಳು ಮತ್ತು ವಿಶಾಲ ನಿಯಂತ್ರಣ ಹರವಿನ ಸಂಸ್ಥಾ ರಚನೆಗಳ ಹೋಲಿಕೆ ಹಾಗೂ ವೈದೃಶ್ಯಗಳನ್ನು ತಿಳಿಸಿ.

**5.** "“ಜೊಹಾರಿ ವಿಂಡೋ” ಎನ್ನುವುದು ಅಂತರ್ ವ್ಯಕ್ತಿ ಘರ್ಷಣೆಯನ್ನು ವಿಶ್ಲೇಷಿಸುವ ಒಂದು ಸಾಧನ.” ಈ ಬಗ್ಗೆ ಚರ್ಚಿಸಿ.

**6.** ಸಾಂಸ್ಥಿಕ ಅಭಿವೃದ್ಧಿ (O.D.) ಎಂದರೇನು ? ಈ ಕೆಳಕಂಡ ಕಾರ್ಯಗಳನ್ನು ಸಾಧಿಸುವುದಕ್ಕೆ ವ್ಯವಸ್ಥಾಪಕರಿಗೆ ನೆರವಾಗುವಂತೆ ನೀವು ಯಾವ O.D. ತಂತ್ರಗಳನ್ನು ಶೀಫಾರಸು ಮಾಡುತ್ತೀರಿ ?

(ಎ) ಸಂಸ್ಥೆಯ ಸ್ತಬ್ಧತೆಯನ್ನು ನಿವಾರಿಸಲು ಹಾಗೂ ಬದಲಾವಣೆಗೆ ವ್ಯಕ್ತವಾಗುವ ವಿರೋಧವನ್ನು ನಿಭಾಯಿಸಲು.

(ಬಿ) ಸಂಸ್ಥೆಯಲ್ಲಿ ಬದಲಾವಣೆ ತಂದು ಮತ್ತೆ ಅದನ್ನು ನೆಲೆಯೂರುವಂತೆ (refreeze) ಮಾಡಲು.

**7.** ಗುಣವೃತ್ತಗಳನ್ನು ವಿವರಿಸಿ. ಇವುಗಳ ಮಹತ್ವವನ್ನು ನಿರೂಪಿಸಿ.

**8.** ಸಿಬ್ಬಂದಿ ಪರಿಶೋಧನೆ ಎಂದರೇನು ? ಇಂತಹ ಪರಿಶೋಧನೆಗೆ ಕಾರಣಗಳೇನು ವಿವರಿಸಿ.

**9.** 1926 ರ ಕಾರ್ಮಿಕ ಸಂಘಟನೆಗಳ ಅಧಿನಿಯಮದ ಉಪಬಂಧಗಳ ಪ್ರಕಾರ ‘ಕಾರ್ಮಿಕ ಸಂಘಟನೆ’ ಎಂದರೇನು ? ಕಾರ್ಮಿಕ ಸಂಘಟನೆಗಳ ಧ್ಯೇಯಗಳನ್ನು ವಿವರಿಸಿ.

**10.** ವ್ಯವಸ್ಥಾಪನೆಯಲ್ಲಿ ಕಾರ್ಮಿಕರ ಸಹಭಾಗಿತ್ವ (WPM) ದ ಪಾತ್ರವನ್ನು ಕುರಿತು ಚರ್ಚಿಸಿ.

**11.** “ಸಿಬ್ಬಂದಿಯ ಸಂಶೋಧನೆಯು ಸಿಬ್ಬಂದಿ ಕುರಿತಾದ ನೀತಿಗಳು ಮತ್ತು ಪದ್ಧತಿಗಳ ಗುಣಮಟ್ಟವನ್ನು ಸುಧಾರಿಸುತ್ತದೆ.” ಚರ್ಚಿಸಿ.

## PART C

*6×15=90*

*Answer each question in about 150 words. Each question carries 15 marks.*

**12.** Describe the factors influencing the organisational structure.

**13.** Critically examine Vroom's VIE Theory of Motivation.

**14.** Compare and contrast Fred Fiedler Contingency Model and Cognitive Resource Theory of leadership.

**15.** Discuss the recent trends in labour relations at global level.

**16.** Give a brief account of the techniques that you use for conflict management.

**17.** Explain how do the labour unions constrain managerial discretion.

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

**12.** ಸಂಸ್ಥಾ ರಚನೆಯ ಮೇಲೆ ಪ್ರಭಾವ ಬೀರುವ ಅಂಶಗಳನ್ನು ವಿವರಿಸಿ.

**13.** ವ್ರೂಮ್‌ನ ಅಭಿಪ್ರೇರಣೆಯ VIE ಸಿದ್ಧಾಂತವನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.

**14.** ನಾಯಕತ್ವ ಕುರಿತಂತೆ ಫ್ರಿಡ್ ಫೀಡ್ಲರ್ ಪ್ರತಿಪಾದಿಸಿದ ಅವಲಂಬಕ ಮಾದರಿ ಮತ್ತು ಜ್ಞಾನಾತ್ಮಕ ಆಕರ ಸಿದ್ಧಾಂತವನ್ನು ಹೋಲಿಸಿ ಮತ್ತು ವೈದೃಶ್ಯವನ್ನು ತಿಳಿಸಿ.

**15.** ಜಾಗತಿಕ ಮಟ್ಟದಲ್ಲಿ, ಕಾರ್ಮಿಕ ಸಂಬಂಧಗಳ ಇತ್ತೀಚಿನ ಪ್ರವೃತ್ತಿಗಳನ್ನು ಕುರಿತು ಚರ್ಚಿಸಿ.

**16.** ಘರ್ಷಣೆಯ ನಿರ್ವಹಣೆಗಾಗಿ ನೀವು ಬಳಸುವ ತಂತ್ರ ವಿಧಾನಗಳನ್ನು ಸಂಕ್ಷಿಪ್ತವಾಗಿ ನಿರೂಪಿಸಿ.

**17.** ಕಾರ್ಮಿಕ ಸಂಘಟನೆಗಳು ಯಾವ ರೀತಿ ವ್ಯವಸ್ಥಾಪನಾ ವಿವೇಚನೆಯನ್ನು ನಿರ್ಬಂಧಿಸುತ್ತವೆ ಎಂಬುದನ್ನು ವಿವರಿಸಿ.

## PART D

3×30=90

*Answer any* ***three*** *of the following questions, each in about 300 words. Each question carries 30 marks.*

**18.** Critically examine the factors that have contributed for the emergence of Organisational Behaviour (OB) as an independent field study by the managers in recent years.

**19.** Explain the factors influencing perception. How does perception affect individual manager's decision-making ? Explain.

**20.** What is a learning organisation ? State its features. How do you change an organisation to make it into a continual learner ?

**21.** Evaluate the relevance of collective bargaining in the context of pro-active personnel policies.

**22.** Identify the factors affecting Worker's Participation in Management (WPM). Do you think the Government can be attributed for improving WPM in the country (i.e. India) ? Explain.

## ಭಾಗ D

*3×30=90*

*ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

**18.** ಇತ್ತೀಚಿನ ವರ್ಷಗಳಲ್ಲಿ, ಸಾಂಸ್ಥಿಕ ನಡವಳಿಕೆ (O.B.) ಯು ವ್ಯವಸ್ಥಾಪಕರಿಂದ ನಡೆಯ ಬೇಕಾದ ಒಂದು ಸ್ವತಂತ್ರ ಕ್ಷೇತ್ರ ಅಧ್ಯಯನವಾಗಿ ಉಗಮಿಸುವುದಕ್ಕೆ ಯಾವ ಅಂಶಗಳು ಕೊಡುಗೆ ನೀಡಿವೆ ಎಂಬುದನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.

**19.** ಗ್ರಹಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳನ್ನು ವಿವರಿಸಿ. ಗ್ರಹಿಕೆಯು ಯಾವ ರೀತಿ ವೈಯಕ್ತಿಕವಾಗಿ ವ್ಯವಸ್ಥಾಪಕರು ನಿರ್ಣಯ ಕೈಗೊಳ್ಳುವುದರ ಮೇಲೆ ಪರಿಣಾಮ ಬೀರುತ್ತದೆ ಎಂಬುದನ್ನು ತಿಳಿಸಿ.

**20.** ಕಲಿಕೆಯ ಸಂಸ್ಥೆ ಎಂದರೇನು ? ಇದರ ಸ್ವರೂಪವನ್ನು ತಿಳಿಸಿ. ಒಂದು ಸಂಸ್ಥೆಯು ನಿರಂತರವಾಗಿ ಕಲಿಯುತ್ತಿರುವಂತೆ ಮಾಡಲು ಅದನ್ನು ಹೇಗೆ ಬದಲಾಯಿಸುತ್ತೀರಿ ?

**21.** ಪರಪ್ರಭಾವೀ (pro-active) ಸಿಬ್ಬಂದಿ ನೀತಿಗಳ ಸಂದರ್ಭದಲ್ಲಿ ಸಾಮೂಹಿಕ ಚೌಕಾಶಿಯ ಪ್ರಸ್ತುತತೆಯನ್ನು ಮೌಲ್ಯಮಾಪನಮಾಡಿ.

**22.** ವ್ಯವಸ್ಥಾಪನೆಯಲ್ಲಿ ಕಾರ್ಮಿಕರ ಸಹಭಾಗಿತ್ವ (WPM) ಕ್ಕೆ ಧಕ್ಕೆ ಉಂಟುಮಾಡುವ ಅಂಶಗಳನ್ನು ಗುರುತಿಸಿ. ದೇಶದಲ್ಲಿ (ಅಂದರೆ ಭಾರತದಲ್ಲಿ) WPM ನ್ನು ಸುಧಾರಿಸುವುದಕ್ಕೆ ಸರ್ಕಾರವು ಕಾರಣವಾಗಬಹುದು ಎಂದು ನೀವು ಭಾವಿಸುತ್ತೀರ ? ವಿವರಿಸಿ.

06/2

# 2010

## ವಾಣಿಜ್ಯಶಾಸ್ತ್ರ ಮತ್ತು ಲೆಕ್ಕಪಾಲನೆ

## ಪ್ರಶ್ನೆಪತ್ರಿಕೆ 2

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 300*

---

**ಸೂಚನೆಗಳು**

ಪ್ರತಿ ಪ್ರಶ್ನೆಯನ್ನು ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಮುದ್ರಿಸಲಾಗಿದೆ.

ನಿಮ್ಮ ಪ್ರವೇಶ ಪತ್ರದಲ್ಲಿ ನಮೂದಿಸಿರುವ ಮಾಧ್ಯಮದಲ್ಲೇ (ಇಂಗ್ಲೀಷ್ ಅಥವಾ ಕನ್ನಡ) ನೀವು ಉತ್ತರಗಳನ್ನು ಬರೆಯತಕ್ಕದ್ದು; ಇದನ್ನು ಉತ್ತರ ಪತ್ರಿಕೆಯ ಮುಖಪುಟದಲ್ಲಿ ಪ್ರತ್ಯೇಕವಾಗಿ ನೀಡಲಾದ ಜಾಗದಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು. ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಸಂದೇಹ ಉಂಟಾದಲ್ಲಿ, ಇಂಗ್ಲೀಷ್ ಪ್ರಶ್ನೆಪತ್ರಿಕೆಯನ್ನು ದಯವಿಟ್ಟು ಗಮನಿಸಿ.

ಈ ಪ್ರಶ್ನೆಪತ್ರಿಕೆಯಲ್ಲಿ ನಾಲ್ಕು ಭಾಗಗಳಿವೆ :

| | |
|---|---|
| **A** | 20 ಅಂಕಗಳು |
| **B** | 100 ಅಂಕಗಳು |
| **C** | 90 ಅಂಕಗಳು |
| **D** | 90 ಅಂಕಗಳು |

ಪ್ರತಿ ಪ್ರಶ್ನೆಗೂ ನಿಗದಿಸಲಾದ ಅಂಕಗಳನ್ನು ಒಂದೊಂದು ಭಾಗದಲ್ಲಿಯೂ ನಮೂದಿಸಲಾಗಿದೆ.

ಭಾಗ A, B ಮತ್ತು C ಯಲ್ಲಿನ ಎಲ್ಲ ಪ್ರಶ್ನೆಗಳನ್ನು ಕಡ್ಡಾಯವಾಗಿ ಉತ್ತರಿಸಿ.
ಭಾಗ D ಯಲ್ಲಿಯ ಯಾವುದಾದರೂ ಮೂರು ಪ್ರಶ್ನೆಗಳನ್ನು ಉತ್ತರಿಸಿ.

SEAL

---

**Note :** *The English version of the instructions is printed on the front cover of this question paper.*